# ಹಾಡು ಹಬ್ಬ ಜನಪದ – ಚಿಮ್ಮಿಬಂತು ದನಪದ

– ಮಾರ್ಷಲ್ ಶರಾಂ

# FOLKLORE BLOOSMES WITH COWSONG

- Marshal Sharam
Associate of Professor
Dept of Kannada
Govt. First Grade College,
Hosanagar 577 418

ಭಾರತೀಯರಲ್ಲಿ ಜಾನುವಾರುಗಳಿಗೆ ವಿಶೇಷ ಗೌರವವಿದೆ. ರೈತಬದುಕಿನ ಬೆನ್ನೆಲುಬು ಜಾನುವಾರು. ವೈದಿಕ ಪರಂಪರೆಯಲ್ಲಿ ಎಲ್ಲಾ ಧಾರ್ಮಿಕ ಕಾರ್ಯಗಳಿಗೂ ಗೋವಿನ ಅಗತ್ಯವಿದೆ. ಜನಪದರಂತೂ ಆಕಳು, ಎಮ್ಮೆ, ಬಸವ, ಹೋರಿಗಳನ್ನು ಮನೆ ಮಕ್ಕಳಂತೆ ಪ್ರೀತಿಸುತ್ತಾರೆ. ಹಸುಗಳ ಹಾಲು, ಗೊಬ್ಬರ ಮತ್ತು ಎತ್ತುಗಳ ಶ್ರಮದ ಜೊತೆಗೆ ಆಪ್ತತೆಯ ಸ್ಪರ್ಷವೂ ಇಲ್ಲಿ ಮುಖ್ಯ. ದೀಪಾವಳೀಲಿ ಗೋಪೂಜೆ ಪ್ರತ್ಯೇಕ ಹಬ್ಬವಾಗಿಯೇ ಆಚರಣೆಯಾಗುತ್ತಿದೆ. ಸಮಾಜದ ಎಲ್ಲಾ ವರ್ಗದ ಜನರೂ, ಜಾನುವಾರುಗಳಿಗೆ ತಮ್ಮ ಗೋಗೌರವವನ್ನು ದೀಪಾವಳೀಲಿ ಸಲ್ಲಿಸುತ್ತಾರೆ. ಹಾಗಾಗಿ ಕನ್ನಡ ಕವಿಗಳು, ಜನಪದರು ಜಾನುವಾರುಗಳ ಸಂಬಂಧ ಸಂವೇದನೆಗಳನ್ನು ತಮ್ಮ ಬರಹಗಳಲ್ಲಿ ಅಭಿವ್ಯಕ್ತಿಸಿದ್ದಾರೆ.

ಹಾಡಿನಲ್ಲಿ ಹಸುಕರು :

ಧರಣಿ ಮಂಡಲ ಮಧ್ಯದೊಳಗೆ
ಮೆರೆವ ಕರ್ಣಾಟ ದೇಶದಿ
ಇರುವ ಕಾಳಿಂಗನೆಂಬ ಗೊಲ್ಲನ
ಪರಿಯ ನಾನೆಂತು ಪೇಳ್ವೆನು

ಎಂದು ಪ್ರೈಮರಿ ಶಾಲೆಯ ನಮ್ಮೇಷ್ಟ್ರು ಪದ್ಯ ಶುರು ಮಾಡ್ದಾಗ ಇಡೀ ಕ್ಲಾಸು ನಿಶ್ಯಬ್ದವಾಗ್ತಿತ್ತು. ಕತೆಯನ್ನು ವಿವರಿಸಿ ಹೇಳ್ತಾ ಇದ್ದಾಗ, ಅಳೋಕೆ ಶುರು ಮಾಡ್ತಿದ್ವಿ. ಅಷ್ಟು ಭಾವಪೂರ್ಣವಾಗಿ, ಅರ್ಥಬದ್ಧವಾಗಿ ನಮ್ಮೇಷ್ಟ್ರುಆ ಪದ್ಯವನ್ನು ಹಾಡ್ತಿದ್ರು. ಅದ್ರಿಂದ್ಲೇ ಇವತ್ತೂ ನಮ್ಮ ಮನಸ್ನಲ್ಲಿ ಆ ಪದ್ಯ ಉಳ್ಕೊಂಬಿಟ್ಟಿದೆ. ಯಾರ ಮೊಲೆಯನ್ನು ಕುಡಿಯಲಮ್ಮ । ಆರ ಸೇರಿ ಬದುಕಲಮ್ಮ ಅಂತ ಕೇಳುವಾಗ ದುಃಖ ಒತ್ತರಿಸಿ ಬಂದು ಅಮ್ಮನನ್ನು ಬಿಗಿಯಾಗಿ ಅವಚಿಕೊಂಡು ಮಲಗ್ತಿದ್ದುದು ಇನ್ನೂ ನೆನಪಿದೆ. ಮೇಷ್ಟ್ರು ಮತ್ತು ನನ್ನಮ್ಮ ಆವೊತ್ತು ಹೇಳ್ತಿದ್ದ ಆ ಕತೆಯ ಅರ್ಥ ಇವೊತ್ತು ಇನ್ನಷ್ಟು ವಿಸ್ತಾರವಾಗಿದೆ ಅನ್ನಿಸ್ತಿದೆ.

ಗೋವಿನ ಕತೆಯು ಬೇರೆ ಬೇರೆ ದೃಷ್ಟಿಕೋನದಲ್ಲಿ ಚರ್ಚೆಗೆ ಒಳಗಾಗಿರುವುದು ಅದರ ಗಟ್ಟಿತನಕ್ಕೆ ಸಾಕ್ಷಿ. ಪುತಿನ, ಕೆ.ವಿ.ಸುಬ್ಬಣ್ಣ, ಡಾ. ಯು.ಆರ್.ಅನಂತಮೂರ್ತಿ, ಹಂಪನಾ, ಮಹೇಶತಿಪ್ಪಾಶೆಟ್ಟಿ, ಟಿ.ಕೇಶವಭಟ್ಟ ಮೊದಲಾದ ಕವಿಗಳು ವಿಮರ್ಶಕರು, ಗೋವಿನ ಕತೆಯನ್ನು ಭಿನ್ನ ಭಿನ್ನ ಆಯಾಮಗಳಿಂದ ನೋಡಿದ್ದಾರೆ. ಗೆಳೆಯ ಡಾ.ಸರ್ಫಾಜ್ ಚಂದ್ರಗುತ್ತಿಯವರು ಪುಣ್ಯಕೋಟಿಯ ಸ್ಥಾನದಲ್ಲಿ ಗಾಂಧೀಜಿಯವರನ್ನೂ, ಹುಲಿಯ ಸ್ಥಾನದಲ್ಲಿ ಬ್ರಿಟೀಷರನ್ನೂ ಇಟ್ಟು ವಿಮರ್ಶಿಸಿದ್ದಾರೆ. ಗೋವಿನ ಹಾಡಿಗೆ ಸತ್ಯ

ನಿರೂಪಣೆಗಿಂತ ಮಿಗಿಲಾದ ಭಿನ್ನ ಧ್ವನಿಗಳಿವೆ. ಮೊದಲ ಓದಿಗೆ ದಕ್ಕದಜೀವನ ಕ್ರಮವೊಂದು ಆ ಕವಿತೆಯಲ್ಲಿ ಹುದುಗಿದೆ.

ಕೊಟ್ಟಿಗೆಗೆ ಓಡೋಡಿ ಬರುತ್ತಿದ್ದ ಪುಣ್ಯಕೋಟಿಯನ್ನು ಹುಲಿ ಅಡ್ಡಗಟ್ಟಿತು. ಏಳುದಿನದ ಹಸಿವಿಗೆ ಆಹಾರವನ್ನು ಹುಲಿ ಕಂಡುಕೊಂಡಿತು. ತನ್ನ ಕರುವಿನ ಹಸಿವನ್ನು ಪುಣ್ಯಕೋಟಿ ನೀಗಿಸಬೇಕಾಗಿದೆ. ಹುಲಿಯ ಹಸಿವಿಗೆ ತಾನೇ ಆಹಾರವಾಗಬೇಕಾಗಿದೆ. ಎರಡು ಹಸಿವುಗಳ ತಾಕಲಾಟ ಇಲ್ಲಿ ವ್ಯಕ್ತವಾಗಿದೆ.

ಒಂದು ನಿಮಿಷ ಮೊಲೆಯ ಕೊಟ್ಟು
ಬಂದು ಸೇರುವೆನಿಲ್ಲಿಗೆ

ಎಂದು ಪುಣ್ಯಕೋಟಿ ತಾನೇ ಮುಂದಾಗಿ ಹುಲಿಯನ್ನು ಆಹ್ವಾನಿಸುತ್ತದೆ. ಸಾವನ್ನು ಯಾರೂ ಆಹ್ವಾನಿಸುವುದಿಲ್ಲ. ಇದು ಪುಣ್ಯಕೋಟಿಯ ಪಾಲಿಗೆ ಸಾವಲ್ಲ. ಪುನರ್ಜನ್ಮ ಹುಲಿಯ ಬಾಯಿಯೇ ಪುನರ್ಜನ್ಮದ Entrance. ಹುಲಿಯ ದೈಹಿಕ ಹಸಿವು ಮಾಯವಾಗಿ ಉನ್ನತಿಕೆಯ ಹಸಿವು ಜಾಗೃತವಾಗುತ್ತದೆ.

ಅಣ್ಣನೆಂದೇ ಕರೆದೆಯೆನ್ನನು
ಇನ್ನುಎನ್ನೊಡಹುಟ್ಟಿ ನೀನು

ಎಂಬ ಹುಲಿಯ ಮಾತುಗಳು ಹಸಿವು ಮತ್ತು ಆಹಾರದ ಬೇಡಿಕೆಗಷ್ಟೇ ಸೀಮಿತವಾಗದೆ, ಅಣ್ಣ ತಂಗಿಯ ಭ್ರಾತೃತ್ವದ ಪ್ರತಿರೂಪವಾಗುತ್ತದೆ. ಇಲ್ಲಿಯವರೆಗಿದ್ದ ಒಡಲ ಹಸಿವು, ಒಡಹುಟ್ಟಿನ ಗಟ್ಟಿತನವಾಗುತ್ತದೆ. ಸಹನೆಯೊಂದೇ ಜಗತ್ತಿನ ಕ್ರೌರ್ಯವನ್ನು ಮಣಿಸಬಲ್ಲ ಮಂತ್ರವೆಂದು ಗೋವಿನ ಹಾಡು ಸಾರುತ್ತದೆ.

ನೀನಾರಿಗಾದೆಯೇ ಎಲೆ ಮಾನವಾ ಕವಿತೆಯು ಹಸುವಿನ ಮಹಿಮೆಯನ್ನು ಕೊಂಡಾಡುತ್ತ ಮನುಷ್ಯನ ಸ್ವಾರ್ಥವನ್ನು ವಿಡಂಬಿಸುತ್ತದೆ. ಹುಲ್ಲಿನಂತಹ ಕಸವನ್ನು ತಿಂದು ಅಮೃತದಂತಹ ಹಾಲನ್ನು ಕೊಡುವ ಹಸುವನ್ನು ನಿಕೃಷ್ಟವಾಗಿ ಕಾಣುವ ಮನುಷ್ಯನ ಬದುಕಿನ ರೀತಿಯನ್ನು ಈ ಕವಿತೆ ಪ್ರಶ್ನಿಸುತ್ತದೆ. ಹೊಲವನ್ನು ಉಳುವುದರಿಂದ ಹಿಡಿದು, ಹೇರನ್ನು ಹೊರುವವರೆಗೆ ನಾನಾ ಬಗೆಯಲ್ಲಿ ರೈತನಿಗೆ ಉಪಕಾರಿಯಾದ ಗೋವಿನ ಬದುಕು ಸಾರ್ಥಕ. ಪ್ರತಿದಿನದ ಬದುಕಿನಲ್ಲಿ ಮೊದಲ ನಮಸ್ಕಾರ ಗೋವಿಗೆ. ಎಲ್ಲ ಶುಭ ಕಾರ್ಯಗಳಿಗೆ ಗೋವು ಬೇಕೆ ಬೇಕು. ಪರೋಪಕಾರಿಯಾದ ಗೋವು ಶ್ರಮಜೀವಿ. ಆದರೆ ಮನುಷ್ಯ? ಒಬ್ಬನನ್ನು ಕಂಡರೆ ಮತ್ತೊಬ್ಬನಿಗೆ ಅಸೂಯೆ. ಕಾಯಕದಲ್ಲಿ ಶ್ರದ್ಧೆ ಇಲ್ಲದ ಸೋಮಾರಿ. ಮನಸ್ಸಿನಲ್ಲಿ ಮಲಿನತೆಯನ್ನು ತುಂಬಿಕೊಂಡ ಮಾನವ ಯಾರಿಗೆ ಉಪಕಾರಿಯಾಗಬಲ್ಲ? ನೀನಾರಿಗಾದೆಯೋ ಎಲೆ ಮಾನವಾ? ನಮ್ಮ ಅಂತರಂಗಕ್ಕೆ ನಾವೇ ಕೇಳಿಕೊಳ್ಳಬೇಕಾದ ಸವಾಲಿದು.

ಪುರಂದರದಾಸರ 'ತುರುಕರು ಕರೆದರೆ ಉಣಬಹುದಣ್ಣ' ಕೀರ್ತನೆಯು ಗೋವಿನ ಮಹಿಮೆಯನ್ನು ಧ್ವನಿಸುತ್ತಲೇ ಮತ್ತೊಂದು ಅರ್ಥವನ್ನು ಹೊರಡಿಸುತ್ತದೆ. ಇಲ್ಲಿ 'ತುರುಕರು' ಎಂದರೆ ದನಕರು. ದನಕರುಗಳಿಂದ ಬರೋ ಪುಣ್ಯ. ಅವುಗಳಿಗೆ ನಾವು ಸಲ್ಲಿಸಬೇಕಾದ ಗೌರವವನ್ನು ಪುರಂದರದಾಸರು ದ್ವಂದಾರ್ಥದಲ್ಲಿ ಅಭಿವ್ಯಕ್ತಿಸುತ್ತಾರೆ. 'ತುರುಕರು ಬಂದರೆ ಸರಕ್ಕನೆ ಏಳಬೇಕು' ಎಂದು ಆಕಳುಗಳ ಬಗ್ಗೆ ಗೌರವ ಮೂಡಿಸುತ್ತಾರೆ. 'ತುರುಕರು' ಜನಾಂಗವಾಣಿಯಾಗಿ ಗಮನಿಸಿದಾಗ ಇಡೀ ಕೀರ್ತನೆ ಬೇರೊಂದು ಅರ್ಥಕ್ಕೆ ತೆರೆದುಕೊಳ್ಳುತ್ತದೆ. 'ಗುಮ್ಮನ ಕರೆಯದಿರೇ' ಕೀರ್ತನೆಯಲ್ಲೂ ಪುರಂದರ ದಾಸರು 'ಆವಿನ ಮೊಲೆಯೂಡೆ ಕರುಗಳ ಬಿಡನೋಡೆ'

ಎಂದು ಗೋವಿನ ಪ್ರಾಮುಖ್ಯತೆಯನ್ನು ವರ್ಣಿಸುತ್ತಾರೆ. ಶ್ರೀಕೃಷ್ಣನ ಪ್ರಪಂಚವೇ ಗೋಕುಲ. ಗೋಪಾಲಕರು, ಗೋಪಿಕೆಯರೇ ಅವನ ಪರಿವಾರ. ಗೋವರ್ಧನ ಗಿರಿಯನೆತ್ತಿ ಗೋವುಗಳಿಗೆ ರಕ್ಷಣೆ ನೀಡುವ ಕೃಷ್ಣ, ಗೋಪಾಲಕೃಷ್ಣನಾಗಿ ಕಾವ್ಯಗಳಲ್ಲಿ ಸ್ಥಾನ ಪಡೆದಿದ್ದಾನೆ.

ದೀಪಾವಳೀಲಿ ದನಕರು :

ಮಲೆನಾಡಿನಲ್ಲಿ ಗೋಪೂಜೆಯ ಸಂಭ್ರಮವೇ ಸಂಭ್ರಮ. ಗೋಪೂಜೆಯ ಹಿಂದಿನ ದಿನ ಸಂಜೆ ದೀಪ ತೋರಿಸಿ ಒಳಗುಡ್ಡೆಯಲ್ಲಿ ದನಗಳನ್ನು ಸ್ವಾಗತಿಸುತ್ತಾರೆ. ಈ ದೀಪದ್ದೇ ಒಂದು ವಿಶೇಷತೆ. ಕಹಿ ಹಿಂಡ್ಲೆಕಾಯಿ ದೀಪಕ್ಕೆ ಪುಂಡಿನಾರಿನ ಮೂರು ಬತ್ತಿಗಳನ್ನು ಚುಚ್ಚಿ ಮಾಡಿರುವ ದೀಪ ಇದು. ಬೆಳಗ್ಗೆದ್ದು ಕೊಟ್ಟಿಗೆಯನ್ನು ಎಂದಿಗಿಂತ ಹೆಚ್ಚು ಶುಭ್ರಗೊಳಿಸುವ ರೈತ ತನ್ನ ಜಾನುವಾರುಗಳನ್ನು ಪ್ರೀತಿಯಿಂದ ಮಾತನಾಡಿಸುತ್ತಾನೆ. ಬೂರಿ ನೀರಿನಿಂದ ಅವುಗಳನ್ನು ಸ್ನಾನ ಮಾಡಿಸುತ್ತಾನೆ. ಶ್ರದ್ಧೆ, ಭಕ್ತಿಗಳಿಂದ ಪೂಜಿಸಿ ನಮಿಸುತ್ತಾನೆ.

ಕೆಲವು ಮನೆಗಳಲ್ಲಿ ಗೋಪೂಜೆಯ ಸಿದ್ದತೆಗಳು ಹದಿನೈದು ದಿನಗಳ ಮೊದಲೇ ಪ್ರಾರಂಭವಾಗ್ತಿತ್ತು. ನೂರರವರೆಗೂ ಜಾನುವಾರುಗಳನ್ನು ಸಾಕಿದ್ದ ರೈತಾಪಿ ಕುಟುಂಬಗಳಿದ್ದವು. ಇವರು ಪ್ರತಿ ಜಾನುವಾರಿಗೂ ಬೇಕಾಗುವ ಅಲಂಕಾರಿಕ ಸಾಮಗ್ರಿಗಳನ್ನು ಕಲೆ ಹಾಕಲು ಹತ್ತು ಹದಿನೈದು ದಿನಗಳೇ ತಗಲುತ್ತಿದ್ದವು. 'ಉಗ್ಗಣೆಕಾಯಿ' ಗೋಪೂಜೆಗೆ ಅತ್ಯಗತ್ಯ. ಇದರ ಸರಮಾಡಿ ದನಕರುಗಳ ಕೊರಳಿಗೆ ತೊಡಿಸುವ ಸಂಪ್ರದಾಯವಿದೆ. ಇದನು ಭೂಮಿ ಹುಣ್ಣಿಮೆ ಆದ ಮೇಲೆ ಕೊಯ್ಯಬೇಕೆಂಬ ಅಲಿಖಿತ ನಿಯಮವೂ ಜನಪದರಲ್ಲಿತ್ತು. ಜಾನುವಾರುಗಳ ಮೈತೊಳೆದ ದಿನ ಕಣ (ಬೇಸಾಯದ ಅಂಗಣ) ಕೆತ್ತಿ ಅಲ್ಲಿ ರೋಣಗಲ್ಲು ನಿಲ್ಲಿಸಿ, ಆ ರೋಣಗಲ್ಲಿಗೆ ಸರಲಹಿಡಿ (ಹುಲ್ಲನ್ನು ರಾಶಿ ಮಾಡಲು ಬಳಸುವ ಉದ್ದನೆಯ ಪೊರಕೆ) ಆನಿಸಿ ಇಡುತ್ತಾರೆ. ಅದರ ಬುಡದಲ್ಲಿ ಸೆಗಣಿ ಕಟ್ಟೆ ಕಟ್ಟಿ ಎರಡು ಗಡಿಗೇಲಿ ಬೂರಿನೀರು ತುಂಬಿಡುತ್ತಾರೆ. ಈ ಗಡಿಗೆಗಳನ್ನು ಜೇಡಿಮಣ್ಣಿಂದ ಅಲಂಕರಿಸುತ್ತಾರೆ.

ಅದೇ ದಿನ ಪುಂಡಿನಾರಿನಿಂದ ಕಣ್ಣಿ (ಜಾನುವಾರುಗಳನ್ನು ಕಟ್ಟುವ ಹಗ್ಗ) ತಯಾರಿಸುತ್ತಾರೆ. ಪೂಜೆಗೆ ಹೊಸ ಕಣ್ಣಿಯಾಗಲೇಬೇಕು. ಒಂದು ವರ್ಷದಲ್ಲಿ ಬೇಸಾಯಕ್ಕೆ ಅಗತ್ಯವಾಗಿರೋಷ್ಟು ಮಿಣೆ, ಜತೆಗೆ ಇತ್ಯಾದಿ ಹಗ್ಗಗಳು ಅಂದೇ ಸಿದ್ಧವಾಗುತ್ತಿದ್ದವು. ಕೆಮ್ಮಣ್ಣು ಮತ್ತು ಜೇಡಿಮಣ್ಣುಗಳನ್ನು ಬೆರೆಸಿ ಸೇರು ಪಾವುಗಳ ಸಹಾಯದಿಂದ ಆಕಳುಗಳ ಮೈಮೇಲೆ ಚಿತ್ರ ಮೂಡಿಸುವ ಸಂಪ್ರದಾಯವಿದ್ದು, ಇದಕ್ಕೆ ಸಿದ್ದೆಗುಮ್ಮ ಎಂಬ ಹೆಸರಿದೆ. ಎತ್ತುಗಳ ಕೋಡನ್ನು ನಯವಾಗಿ ಹೆರೆದು ಅವುಗಳಿಗೆ ಕೋಡು ಗೊಣಸು, ಬಣ್ಣದ ಕುಚ್ಚು ತೊಡಿಸಿ, ಟೇಪು ಕಟ್ಟಿ ಸಿಂಗರಿಸುತ್ತಿದ್ದರು. ಕೊರಳು ಮತ್ತು ಕಾಲಿಗೆ ಗೆಜ್ಜೆ, ಬೆನ್ನಿಗೆ ಜೂಲು ಹಾಕಿದ ಎತ್ತುಗಳು ಗಾಡಿ ಹೊತ್ತು ನಡೆಯುವಾಗ ಅದರ ಗಮ್ಮತ್ತೇ ಬೇರೆ.

ಇವೆಲ್ಲ ಗೋಪೂಜೆಗಾಗಿಯೇ ನಡೆಯುವ ತಯಾರಿ. ಪೂಜೆಗೊಂಡ ದನ ಕರುಗಳೆಲ್ಲ ಸಿಂಗಾರಗೊಂಡ ಮದುಮಕ್ಕಳಂತೆ ಕೊಟ್ಟಿಗೆಯಿಂದ ಹೊರ ನಡೆಯುತ್ತವೆ. ಉಗ್ಗಣೆಕಾಯಿ ಸರ, ಚೆಂಡುಹೂವಿನ ಸರ, ಪಚ್ಚೆಬೀಳು, ಕೂಳೆಬೀಳು, ಮಾಲಿಂಗನ ಬಳ್ಳಿ, ಉತ್ತರಾಣಿ ಕದಿರು, ತುಳಸಿ ಕುಡಿ, ವೀಳ್ಯದೆಲೆ ಮೊದಲಾದ ಮಾಲೆಗಳು ಅವುಗಳ ಅಂದವನ್ನು ಹೆಚ್ಚಿಸುತ್ತವೆ.ಈ ಮಾಲೆಗಳ ನಡುವೆ ಚಪ್ಪೆರೊಟ್ಟಿ, ಕಡಬು, ತೆಂಗಿನಕಾಯಿ, ಕೊಬ್ಬರಿ ಪೋಣಿಸುತ್ತಾರೆ. ಕೆಲವೊಮ್ಮೆ ಚಿನ್ನದ ಸರವನ್ನು ಪೋಣಿಸಿ ಅದನ್ನು ಕಸಿದು ತರುವಂತ ಸ್ಪರ್ಧೆಗಳೂ ರೂಢಿಯಲ್ಲಿತ್ತು. ಇನ್ನೂ ಕೆಲವು ಕುಟುಂಬಗಳಲ್ಲಿ ಪೂಜೆಗಾಗಿಯೇ ಒಂದು

ಬಸವನನ್ನು, ಎತ್ತನ್ನೂ ಮೀಸಲಿಡುತ್ತಿದ್ದರು. ವರ್ಷವಿಡೀ ತನಗೆ ಮಾಡಿದ ಉಪಕಾರಕ್ಕಾಗಿ ಮನುಷ್ಯ ದೀಪಾವಳಿಯ ದಿನ ಪೂಜೆಯ ಮೂಲಕ ಗೋವುಗಳಿಗೆ ತನ್ನ ಕೃತಜ್ಞತೆಗಳನ್ನು ಹೀಗೆ ಸಲ್ಲಿಸುತ್ತಿದ್ದ.

ಜನಪದದಲ್ಲಿ ಜಾನುವಾರು :

ಬಸವನಾಟ ಒಂದು ಕಲೆ. ರಾಮಸೀತೆಯರ ಮದುವೆಯ ಪ್ರಸಂಗವನ್ನು ಜನಪದೀಯ ಆವರಣದೊಳಗೆ ಹಿಡಿದಿಡುವ ಪ್ರಯತ್ನ ಬಸವನಾಟ. ಮದುಮಗನಂತೆ ಬಸವನ ಸಿಂಗಾರ. ಗಂಟೆಸರ, ಗಗ್ಗರದ ಸರ, ಕೋಡುಗೊಣಸು, ಬೆನ್ನಮೇಲೆ ಚಿತ್ತಾರದ ಹಸುಗಿನ ಚೀಲ. ಡುಬ್ಬಕ್ಕೆ ತರಾವರಿ ಬಟ್ಟೆಯ ಅಲಂಕಾರ. ಥೇಟ್ ಮದುವಣಿಗನಂತೆ, ರಾಮ ಸೀತೆಗೆ ಹಳೆ ಪಂಚೆ, ಹಳೇ ಸೀರೆ ಇನಾಮು ಕಡ್ಡಾಯ. ಬಸನಾಡುವವನೂ ಅಂತಾದ್ದೇ Costume ಗಳನ್ನು ಧರಿಸುತ್ತಾನೆ. ತಲೆಗೆ ಮುಂಡಾಸು, ಬಗಲಲ್ಲಿ ಜೋಳಿಗೆ, ನಾಗಸ್ವರ, ಮೋರಿ, ಸಮ್ಮೇಳ ವಾದ್ಯಗಳಿಂದ ರಾಮ ಸೀತೆಯ ಕತೆಯನ್ನು ಪ್ರದರ್ಶಿಸುವ ಇವರ ಕುಲಕಸುಬು ಬಸವನಾಟ. ಹೀಗೆ ಬಸವ ಸಾಂಸ್ಕೃತಿಕ ಪ್ರದರ್ಶನ ನೀಡುವ ಮೂಲಕವೂ ತನ್ನ ಒಡೆಯನ ಹೊಟ್ಟೆ ಹೊರೆಯುತ್ತಾನೆ.

ಜನಪದ ಸಾಹಿತ್ಯದಲ್ಲಿ ಗೋವುಗಳ ಪ್ರಸ್ತಾಪ ಹೇರಳವಾಗಿದೆ. ಎಲ್ಲ ಶುಭಕಾರ್ಯಗಳಲ್ಲೂ ಗೋವಿನ ರೂಪ ಒಂದಿಲ್ಲೊಂದು ಬಗೆಯಲ್ಲಿ ಕಾಣಿಸಿಕೊಳ್ಳುತ್ತದೆ. ಕೌಟುಂಬಿಕ ಸಂಬಂಧಗಳಿರಲಿ,ಕೃಷಿ ವಿಚಾರಗಳಿರಲಿ, ಹಾಡು ಹಸೆಯ ಸಂಗತಿಗಳಿರಲಿ ಗೋವುಗಳ ಉಲ್ಲೇಖ ಜನಪದದಲ್ಲಿ ಇದ್ದೇ ಇದೆ. ಜನಪದ ಸಾಹಿತ್ಯದಲ್ಲಿ ಗೋವು ಎಂದರೆ ಹಸು, ಹೋರಿ,ಎತ್ತು,ಎಮ್ಮೆ,ಕೋಣ ಎಲ್ಲವೂ ಸೇರುತ್ತವೆ.

'ಮಾತಾಡ್ ಮಾತಾಡ್ ಮಲ್ಲಿಗೆ ಜನಪದ ಗೀತೆಯನ್ನು ಕೇಳಿದ್ದೀವಿ. ಅದರ ಒಂದು ನುಡಿ ಹೀಗಿದೆ;
ಒಬ್ಬೋನ ಕಟ್ಟಿದ್ದೆ ಒಬ್ಬೋನ ಬಿಟ್ಟಿದ್ದೆ । ಒಬ್ಬೋನ ಕರಕೊಂಡು ಒಳಗೋದೆ ಮಲ್ಲಿಗೆ'

ಎನ್ನುವಾಗ ಕುತೂಹಲ ಕಾಡುತ್ತದೆ. ಯಾರನ್ನು ಕಟ್ಟಿದ್ದು, ಯಾರನ್ನು ಬಿಟ್ಟಿದ್ದು, ಯಾರನ್ನು ಕರಕೊಂಡು ಒಳಗೋಗಿದ್ದು ಎಂದು ಯೋಚಿಸುತ್ತಿರುವಾಗಲೇ ಉತ್ತರ ದೊರೆಯುತ್ತದೆ.

ಹಸುವನ್ನು ಕಟ್ಟಿದ್ದೆ । ಕರುವನ್ನು ಬಿಟ್ಟಿದ್ದೆ । ಹಾಲನ್ನು ಕರಕೊಂಡು ಒಳಗ್ಹೋದೆ ಮಲ್ಲಿಗೆ

ಬೆಟ್ಟದಂತಹ ಕೆಟ್ಟ ಕುತೂಹಲವನ್ನು ಜನಪದ ಕವಿ ನಿರಾಳವಾಗಿ ನಿವಾರಿಸುವ ಕಲಾತ್ಮಕತೆ ಇಲ್ಲಿದೆ. ಹಸು, ಕರು ಮತ್ತು ಹಾಲುಗಳ ಮಹತ್ವವನ್ನು ಕವಿ ಮೇಲಿನ ಗೂಢಾರ್ಥದಲ್ಲಿ ಬಚ್ಚಿಟ್ಟಿದ್ದಾನೆ.

ತವರಿಗೂ ಜಾನುವಾರುಗಳಿಗೂ ನಿಕಟ ಸಂಬಂಧವಿದೆ. ತಾಯಿಯ ವಾತ್ಸಲ್ಯವನ್ನು ಹಸುವಿನಲ್ಲಿ ಕಾಣುವ ಹೆಣ್ಣು ಮಕ್ಕಳಿದ್ದಾರೆ. ಮಕ್ಕಳ ಪ್ರೀತಿಯನ್ನು ಮುದ್ದು ಕರುವಿನಲ್ಲಿ ಕಾಣುವ ತಾಯಂದಿರಿದ್ದಾರೆ. ಹಸುಕರುಗಳ ವಾತ್ಸಲ್ಯ, ಪ್ರೀತಿಯ ಸಂಕೇತವಾಗಿ ಜನಪದ ಕಾವ್ಯಗಳಲ್ಲಿ ಅಭಿವ್ಯಕ್ತವಾಗಿದೆ.

ಆಕಳ ಕರು ಒಂದು ಅಂಬಾ ಎಂದು
ತಮ್ಮವ್ವನ ಮೊಲಿಯ ನಲಿನಲಿದು ಉಂಬಾಗ
ನಮ್ಮವ್ವನ ಧ್ಯಾನ ನನಗಾಗಿ॥

ಈ ತ್ರಿಪದಿಯಲ್ಲಿ ಕೊಟ್ಟಿಗೆಯಲ್ಲಿರುವ ಕರು ತನ್ನ ತಾಯಿಯ ಹಾಲು ಕುಡಿಯುವಾಗ ಮನೆಯ ಒಡತಿಗೆ ತಾನುಂಡ ತನ್ನ ತಾಯಿಯ ತವರಿನ ನೆನಪಾಗುತ್ತದೆ. ತೌರೂರು ಆಕೆಯ ಪಾಲಿಗೆ ಎಲ್ಲವನ್ನೂ ಕೊಡಬಲ್ಲ ಕಾಮಧೇನು. ನಲಿವಿರಲಿ ನೋವಿರಲಿ, ಸಂತಸ ಸಂಕಟಗಳೇನೇ ಇರಲಿ ತೌರೂರನ್ನು ಆಕೆ ಮರೆಯಲಾರಳು. ಹೆರಿಗೆಗೆ ಬಂದವಳು ತವರಿನ ಸೀರೆಯುಟ್ಟು ಕಂದನೊಂದಿಗೆ ಗಂಡನ ಮನೆಗೆ ಮರಳುವಾಗ ಅಪ್ಪ ಕೊಟ್ಟೆಮ್ಮೆ ಹೊಡ್ಕೊಂಡು ಹೋಗುತ್ತಾಳೆ.

ಗಂಡನ ಮನೆಯಲ್ಲಿ ಹೇಗಿರಬೇಕೆಂದು ತಾಯಿ ಮಗಳಿಗೆ ಪರಿಪರಿಯಾಗಿ ಬುದ್ಧಿ ಹೇಳುತ್ತಾಳೆ. ಆರಂಭದಲ್ಲಿ ತವರನ್ನು ಮರೆತು ಗಂಡನ ಮನೆಗೆ ಒಗ್ಗಿಕೊಳ್ಳುವುದು ತುಸು ಕಷ್ಟನೇ. ಅಂತಹ ಮದುಮಗಳ ನಿರೀಕ್ಷೆ ಹೀಗೆ ಗರಿಗೆದರುತ್ತದೆ.

ಆಕಳಂಥ ಅತ್ತಿ ಗೋಕುಲದಂಥಾ ಮಾವ ।
ಶ್ರೀಕೃಷ್ಣನಂತ ಪತಿರಾಯನಿದ್ದರೆ
ಸಾಕೀದ ತವರ ಮರೆತೇನ॥

ತವರಿನ ಪ್ರೀತಿ ಗಂಡನ ಮನೆಯಲ್ಲಿ ದೊರೆತರೆ ತವರನ್ನು ಮರೆಯಲು ಈಕೆ ಸಿದ್ಧ. ಹಸುವಿನ ಸ್ವಭಾವದ ಅತ್ತೆ ಮಾವ, ಗೋಕುಲದ ಮುಖ್ಯಸ್ಥನಾದ ಶ್ರೀಕೃಷ್ಣನಂತಹ ಗಂಡನೇ ಈಕೆಯ ಹಂಬಲ. ಹಸುವಿನಂತಹ ಮುಗ್ಧ ಸ್ವಭಾವದ ಜನರು ತನ್ನ ಸುತ್ತವಿರಲಿ ಎಂಬ ಆಶಯ ಈ ಹೆಣ್ಣಿನದು. ತಂದೆಯ ಹಿಂದೆ ಬರುವ ಮಗನನ್ನು ತಾಯಿ ಹೀಗೆ ಕಾಣುತ್ತಾಳೆ.

ಗಾಳಿದೇವ ಕೂಡ ಘೂಳೀದೇವರು ಬಂದಾ । ಆಕಳ ಹಿಂದೆ ಕರ ಬಂದಾ

ಜನಪದ ಕವಿಗಳು ಗೋವುಗಳನ್ನು ಆತ್ಮೀಯತೆಯಿಂದ ಸ್ವೀಕರಿಸಿ, ಕೃಷಿಯ ಬೆನ್ನೆಲುಬಾಗಿ ಚಿತ್ರಿಸಿದ್ದಾರೆ. 'ಹಸುವಿನ ತೊರಕೆ ಸೂಸಿ ಮುಗುಲು ಎದ್ದಾವೆ' ಎಂಬ ಮಾತಿನಲ್ಲಿ ಮಳೆಯ ನಿರೀಕ್ಷೆಯನ್ನು, ಮೋಡಗಳ ಚಲನವಲನಗಳನ್ನು ಕವಿ ವಿವರಿಸಿದ್ದಾನೆ.

ಎತ್ತುಗಳು ಜನಪದ ಕಾವ್ಯಾಭಿವ್ಯಕ್ತಿಯಲ್ಲಿ ಸ್ಥಾನ ಪಡೆದಿವೆ. ತಮ್ಮನ ಕೊಟ್ಟಿಗೇಲಿ ಎತ್ತುಗಳ ಸಂಖ್ಯೆ ಹೆಚ್ಚಾಗಲಿ ಎಂದು ಅಕ್ಕ ಬಯಸುತ್ತಾಳೆ. ತಮ್ಮನ ಎತ್ತು ಹದಿನಾರ ಎಂದು ಹರಸುತ್ತಾಳೆ. ನಲ್ಲನಲ್ಲೆಯರ ಸವಿಮಾತುಗಳಲ್ಲಿ ಎತ್ತು ಕೊರಳು ಚಾಚುತ್ತದೆ. ನಲ್ಲ ನಲ್ಲೆಗೆ ಹೇಳೋ ಮಾತು: 'ನಮ್ಮೆತ್ತು ಮುಂದೆ ಮೂರೆಜ್ಜೆ ಇಡೋದಿಲ್ಲ' ನಲ್ಲೆ ಹೇಳುತ್ತಾಳೆ– ಊರುವಸಿಯಂಥ ಮೊಕದವಳ ನೀ ಕಂಡು ಹೋರಿ ಹೂಡೋಕೆ ಮನಸಿಲ್ಲ. ಹೋರಿಗಳನ್ನು ಜನಪದರು ಹೀಗೆ ನಾಮಕರಣ ಮಾಡುತ್ತಾರೆ:

ಕಾಳ್ಹೋರಿ ಕಪ್ಪೋರಿ ಕಡಲೆ ಬಣ್ಣದ ಹೋರಿ ।
ಈರಣ್ಣನೆಂಬೋ ಹೊಸ ಹೋರಿ । ಕಟ್ಕೊಂಡು
ನೂರೊಂದು ಸಾಲ ಹೊಡೆದವ್ನೆ ॥

ಕೋಲಿನ ಪದಗಳಿಗೆ ಬಸವಣ್ಣ ವಸ್ತುವಾಗಿದ್ದಾನೆ. ಹೇರನ್ನು ಹೊರುವುದು, ಬಂಡಿ ಎಳೆಯುವುದು ಮಾತ್ರ ಬಸವನ ಕೆಲಸ ಅಲ್ಲ. ಸಾರಸ್ವತ ಲೋಕದಲ್ಲೂ ಬಸವಣ್ಣನಿಗೆ ಕೆಲಸವಿದೆ. ಮೊದಲ ಕೋಲು ಎಂಬ ಕೋಲಿನ ಪದದಲ್ಲಿ

> ಆರು ಸಾವಿರ ಪದವ ಹೋರಿ ಮೇಲ್ಹೇರ್ಕಂಡು। ಬಸವಣ್ಣ ಸಭೆಗೆ ಬಂದೇವು ಕೋಲೆ
> ಕೋಲೆನ್ನಲೊಬ್ಬ ಬಸವಣ್ಣ ಕೂತ್ಕೊಂಡು । ಲಾಲೀಸಿ ಪದವ ಬರಕೊಂಡ ಕೋಲೆ'

ಬಸವಣ್ಣನ ಜಾಗ ಕೋಲಿನ ತುದಿಯ ಮೇಲೆ. ಕೋಲಿನ ಪದಗಳನ್ನಷ್ಟೂ ಬರೆದುಕೊಳ್ಳುವ ಕೆಲಸ ಆತನದು. ಜನಪದರು ಬಸವನಿಗೆ ಕೊಟ್ಟಿರುವ ಅಗ್ರ ಸ್ಥಾನಕ್ಕೆ ಈ ಕೋಲಿನ ಪದ ಸಾಕ್ಷಿ.

ಜನಪದರು ತಮ್ಮ ಬದುಕಿನಲ್ಲಿ ಕಂಡುಂಡ ಬೆರಳೆಣಿಕೆಯ ಅನುಭವಗಳು ಇವು. ಅಪಾರ ಸಂಖ್ಯೆಯ ವೈವಿಧ್ಯಮಯವಾದ ಪದ್ಯಗಳೂ ಕತೆಗಳೂ ಹೇರಳವಾಗಿವೆ. ಜನಪದ ಸಾಹಿತ್ಯದ ಆಳಕ್ಕೆ ಇಳಿದಷ್ಟೂ ಹೆಚ್ಚು ಹೆಚ್ಚು ದೃಷ್ಟಾಂತಗಳನ್ನು ಹೊರತೆಗೆಯಬಹುದು. ಗೋವುಗಳ ಮತ್ತು ಮನುಷ್ಯನ ಸಂಬಂಧದ ಸ್ವರೂಪ ಇಂತಹ ದಾಖಲೆಗಳಲ್ಲಿ ಸಮರ್ಥವಾಗಿ ಪ್ರತಿಬಿಂಬಿತವಾಗಿದೆ.

ಮನುಷ್ಯ, ಗೋವು ಮತ್ತು ಆಚರಣೆಗಳು ಪರಸ್ಪರ ಪೂರಕವಾಗಿದ್ದವು. ಒಂದರ್ಥದಲ್ಲಿ ಗೋವುಗಳೇ ರೈತರನ್ನು ಪೋಷಿಸುತ್ತಿದ್ದವು. ನಮ್ಮ ಸಾಂಸ್ಕೃತಿಕ ಬದುಕಿನ ಒಡನಾಡಿಗಳಾಗಿದ್ದ ಜಾನುವಾರುಗಳು ಇಂದು ಕೇವಲ ಹಾಲು ಉತ್ಪಾದಿಸುವ ಸರಕುಗಳಾಗಿವೆ. ಮೂಕ ಭಾಷೆಯಲ್ಲಿ ಅದಮ್ಯ ಸಂವೇದನೆಗಳನ್ನು ಅಭಿವ್ಯಕ್ತಿಸುತ್ತಿದ್ದ ಜಾನುವಾರುಗಳು ಹೈಬ್ರಿಡ್ ಹುಲ್ಲು, ಹಿಂಡಿಗಳಿಂದಾಗಿ ಯಾಂತ್ರಿಕ ಬದುಕಿಗೆ ಒಗ್ಗಿಕೊಂಡಿವೆ. ಮನುಷ್ಯನೂ ಕೇವಲ ಹಾಲ ಮತ್ತು ಅದರ ಉತ್ಪನ್ನಗಳಿಗೆ ಗಮನ ನೀಡುತ್ತಿರುವುದರಿಂದ ಮನುಷ್ಯ ಗೋವಿನ ಸಂಬಂಧ ಸಡಿಲವಾಗಿದೆ. ಗೋವು 'ಹಾಲಿನ ಪ್ರಾಣಿ' ಯಾಗಿ ಕೊಟ್ಟಿಗೆಗಳಲ್ಲಿ,ಡೈರಿಯಲ್ಲಿ ಬಿಗಿಯಲ್ಪಟ್ಟಿದೆ. ಹಾಲನ್ನು Trade Concept ಆಗಿ ಸ್ವೀಕರಿಸಿದಾಗ ಗೋವುಗಳೊಂದಿಗೆ ನಮಗಿದ್ದ ಸಾಂಸ್ಕೃತಿಕ ಮತ್ತು ಧಾರ್ಮಿಕ ಭಾವನೆಗಳು ಜಾಳು ಜಾಳಾದವು.

~~~~~~~~~~
~~~~~~~~~~